# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 367
2. ಸದಸ್ಯರ ಹೆಸರು : ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸುವ ದಿನಾಂಕ : 15-02-2024
4. ಉತ್ತರಿಸುವವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಮಿಷನ್‌ರಸ್ತೆ ಅಗಲೀಕರಣಕ್ಕೆ ಸಂಬಂಧಿಸಿದಂತೆ ಅಭಿವೃದ್ಧಿ ಹಕ್ಕು ವರ್ಗಾವಣೆ (ಬಿ.ಡಿ.ಆರ್) ಕೋರಿ ಯಾರು-ಯಾರು ಅರ್ಜಿ ಸಲ್ಲಿಸಿರುತ್ತಾರೆ: ಯಾರು ಯಾರಿಗೆ ಇಲ್ಲಿ ಬಿ.ಡಿ.ಆರ್ ನೀಡಲಾಗಿದೆ: (ವಿವರ ಒದಗಿಸುವುದು) | ಮಿಷನ್‌ರಸ್ತೆ ಅಗಲೀಕರಣಕ್ಕೆ ಸಂಬಂಧಿಸಿದಂತೆ ಅಭಿವೃದ್ಧಿ ಹಕ್ಕು ವರ್ಗಾವಣೆ (ಟಿ.ಡಿ.ಆರ್) ಕೋರಿ ಶ್ರೀಮತಿ ಸತ್ಯಕುಮಾರಿ, ಶ್ರೀ ಎಂ. ಗೋಪಿ ಮತ್ತು ಎಸ್.ಪಿ ಕೃಷ್ಣರಾಜ್ ರವರು ಅರ್ಜಿ ಸಲ್ಲಿಸಿರುತ್ತಾರೆ. ಈ ಪೈಕಿ ಶ್ರೀಮತಿ ಸತ್ಯಕುಮಾರಿ ಮತ್ತು ಶ್ರೀ ಎಂ. ಗೋಪಿ ರವರಿಗೆ ಡಿ.ಆರ್.ಸಿ/ಟಿ.ಡಿ.ಆರ್. ನೀಡಲಾಗಿದೆ. ಡಿ.ಆರ್.ಸಿ ಕೋರಿ ಫಾರಂ-4 ಸಲ್ಲಿಸಿರುವ, ಶ್ರೀ ಎಸ್.ಪಿ. ಕೃಷ್ಣರಾಜ್ ರವರಿಗೆ ಡಿ.ಆರ್.ಸಿ ನೀಡಲು ಫಾರಂ-3 ಅಧಿಸೂಚನೆ ಹೊರಡಿಸಿ ಭೂಸ್ವಾಧೀನಗೊಳ್ಳುತ್ತಿರುವ ಜಾಗಕ್ಕೆ ಪರಿತ್ಯಾಜ್ಯನಾ ಪತ್ರ ನೋಂದಾಯಿಸಲು ನೀಡಲಾಗಿರುತ್ತದೆ. |
| ಆ | ಮಿಷನ್ ರಸ್ತೆ ಅಗಲೀಕರಣಕ್ಕೆ ಸಂಬಂಧಿಸಿದಂತೆ ಫಾರಂ ನಂ 1ಅನ್ನು ಯಾರು ಯಾರಿಗೆ ನೀಡಲಾಗಿದೆ: ಫಾರಂ ನಂ 1ನ್ನು ನೀಡಿ ಹಲವಾರು ವರ್ಷಗಳು ಕಳೆದರೂ ಭೂಮಿ ಕಳೆದುಕೊಂಡವರಿಗೆ ಬಿಡಿಆರ್ ನೀಡದೆ ತೊಂದರೆ ನೀಡುತ್ತಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳಲು ಸರ್ಕಾರಕ್ಕಿರುವ ತೊಂದರೆ ಏನು ಇದೆ? (ವಿವರ ನೀಡುವುದು) | ಪ್ರಸ್ತುತ ಎಸ್.ಪಿ. ಕೃಷ್ಣರಾಜ್ ರವರ ಸ್ವತ್ತಿಗೆ ಫಾರಂ-1ನ್ನು ನೀಡಿದ್ದು, ಡಿ.ಆರ್.ಸಿ. ನೀಡುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. |
| ಇ | ಮಿಷನ್ ರಸ್ತೆ ಅಗಲೀಕರಣಕ್ಕೆ ಸಂಬಂಧಿಸಿದಂತೆ ಬಿಡಿಆರ್‌ನ ಮೂಲ ಕಡತಗಳು ಹಾಗೂ ಇನ್ನಿತರ ದಾಖಲಾತಿಗಳು ಕಾಣೆ ಆಗಿರುವುದು ನಿಜವೇ: ಇದರಿಂದ ಭೂಮಿ ಕಳೆದು ಕೊಂಡವರಿಗೆ ತೊಂದರೆಗಿಡಾಗಿ ಮಾನಸಿಕ ಹಿಂಸೆ ಕಿರುಕುಳವಾಗುತ್ತಿದ್ದು ಸರ್ಕಾರ ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಿದೆ: | ಮಿಷನ್ ರಸ್ತೆ ಅಗಲೀಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಕಡತಗಳು ಹಾಗೂ ಇನ್ನಿತರ ದಾಖಲಾತಿಗಳು ಕಾಣೆಯಾಗಿರುವುದು ಕಂಡುಬಂದಿರುವುದಿಲ್ಲ. |

| | | |
|---|---|---|
| ಈ | ವಿಷನ್ ರಸ್ತೆ ಅಗಲೀಕರಣ ಸಂಬಂಧ ಒಬ್ಬರಿಗೆ ಬಿಡಿಆರ್ ನೀಡಿ ಇನ್ನೋಬರಿಗೆ ಬಿಡಿಆರ್ ನೀಡಲು ವಿಳಂಭ ಧೋರಣೆಯನ್ನು ಅನುಸರಿಸುತ್ತಿರುವ ಸರ್ಕಾರದ ಗಮನಕ್ಕೆ ಬಂದಿದೆಯೇ ಬಂದಿದ್ದಲ್ಲಿ ಈ ಬಗ್ಗೆ ಕೂಲಂಕುಷವಾಗಿ ಕ್ರಮಕೈಗೊಂಡು ಭೂಮಿ ಕಳೆದುಕೊಂಡ ಹಾಗೂ ಬಿಡಿಆರ್ ಕೋರಿ ಅರ್ಜಿ ಸಲ್ಲಿಸಿರುವ ಭೂಮಾಲೀಕರಿಗೆ ಯಾವುದೇ ಕುರುಕುಳ ನೀಡದೆ ಬಿಡಿಆರ್ ನೀಡುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಉನ್ನತ ಅಧಿಕಾರಿಗಳಿಗೆ ಸೂಚಿಸಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೇ? (ವಿವರ ನೀಡುವುದು) | ಪ್ರಸ್ತುತ ಶ್ರೀ ಎಸ್.ಪಿ ಕೃಷ್ಣರಾಜ್ ರವರು ಮಾತ್ರ ಡಿ.ಆರ್.ಸಿ. ಕೋರಿ ಫಾರಂ–4 ಸಲ್ಲಿಸಿರುತ್ತಾರೆ. ಸದರಿಯವರಿಗೆ ಡಿ.ಆರ್.ಸಿ ನೀಡಲು ಫಾರಂ–3 ಅಧಿಸೂಚನೆ ಹೊರಡಿಸಿ ಭೂಸ್ವಾಧೀನಗೊಳ್ಳುತ್ತಿರುವ ಜಾಗಕ್ಕೆ ಪರಿತ್ಯಾಜ್ಯನಾ ಪತ್ರ ನೋಂದಾಯಿಸಲು ನೀಡಲಾಗಿರುತ್ತದೆ. |

**ಸಂಖ್ಯೆ: ನಅಇ 24 ಬಿಬಿಎಲ್ 2024**

**(ಡಿ.ಕೆ.ಶಿವಕುಮಾರ್)**
ಉಪ ಮುಖ್ಯಮಂತ್ರಿ.